ಎಂಬ ಶಬ್ದ ಎಲ್ಲೆಲ್ಲೂ ಬರದಂತೆ ಎಚ್ಚರ ವಹಿಸಲಾಗಿದೆ.

ಮುಖ್ಯವಾಗಿ ನಮ್ಮ ಕೆಲಸ ಅಪರೂಪದ ಕಾಯಿಲೆಗಳಿಂದ ಬಳಲುತ್ತಿರುವವರನ್ನು ಭೇಟಿ ಮಾಡುವುದು. ರೋಗಿಗಳನ್ನು ಕ್ಲಯಂಟ್‌ಗಳೆಂದು ಕರೆಯಬಾರದು ಎಂದೂ ನಮಗೆ ಮ್ಯಾನೇಜ್‌ಮೆಂಟಿನಿಂದ ಕಟ್ಟುನಿಟ್ಟಿನ ಆದೇಶವಿದೆ. ರೋಗಿಗಳ ಮನೆಗಳಿಗೇ ಹೋಗಿ ಈ 'ಸಫರರ್'ಗಳನ್ನೂ, ಅವರನ್ನು ನೋಡಿಕೊಳ್ಳುವ 'ಕೇರ್ ಟೇಕರ್'ಗಳನ್ನೂ ಮಾತನಾಡಿಸಿ ಅವರ ಸ್ಥಿತಿಯ ರೋಗ ಲಕ್ಷಣಗಳನ್ನು ಪಟ್ಟಿ ಮಾಡುವುದು ನಮ್ಮ ಮುಖ್ಯ ಜವಾಬ್ದಾರಿಗಳಲ್ಲೊಂದು. ನಮ್ಮ ಕಂಪೆನಿ ತಯಾರಿಸುವ ಡ್ರಗ್‌ಗಳ ಪ್ರಾಯೋಗಿಕ ಟ್ರಯಲ್‌ಗಳಲ್ಲಿ ಪಾಲ್ಗೊಳ್ಳಲು ಇವರನ್ನು ಹುರಿದುಂಬಿಸುವುದು ಮತ್ತು ಆ ಖರ್ಚಿನ ಒಂದು ಭಾಗವನ್ನಾದರೂ ರೋಗಿಗಳ ಆರೋಗ್ಯ ವಿಮೆಯೇ ಭರಿಸುವಂತೆ ನೋಡಿಕೊಳ್ಳುವುದು ನಮಗಿರುವ ಇನ್ನೊಂದು ಹೊಣೆ. ವರ್ಷಾಂತ್ಯದಲ್ಲಿ ಷೇರುಗಳ ರೂಪದಲ್ಲಿ ಕೊಡಮಾಡುವ ಬೋನಸ್ ಕೂಡ ಕಂಪೆನಿಯ ಏಳ್ಗೆಗಾಗಿ ನಾವೆಷ್ಟು ಲಾಭವನ್ನು ಸೇರಿಸಿದ್ದೇವೆ ಎಂಬುದರ ಮೇಲೆ ನಿರ್ಧಾರಿತವಾಗಿರುತ್ತದೆ.

ಈ ರೋಗಿಗಳ ನಿರ್ದಿಷ್ಟ ಅಗತ್ಯಗಳನ್ನೂ, ಒದಗಿರುವ ಮತ್ತು ಒದಗಬೇಕಿರುವ ಸೌಲಭ್ಯಗಳನ್ನೂ ವೈಯಕ್ತಿಕ ನೆಲೆಯಲ್ಲಿ ತಿಳಿದುಕೊಳ್ಳುವುದು ಒಂಥರಾ ನಾಜೂಕಿನ ಹಾದಿ. ಅವರ ಸ್ಥಿತಿಯ ಬಗ್ಗೆ ಕಂಪ್ಯೂಟರಿನ ಮುಂದೆ ಕೂತು ಒಣ ಒಣ ಭಾಷೆಯಲ್ಲಿ ರಿಪೋರ್ಟು ಬರೆದಿಡುವುದಕ್ಕೂ, ರೋಗಿಗಳ ಡೇಟಾ ಬೇಸ್ ತಯಾರು ಮಾಡುವುದಕ್ಕೂ, ತೀರಾ ಅಪರೂಪದ ಕೇಸ್ ಇದ್ದರೆ ಆ ಕುರಿತು ಮೀಟಿಂಗಿನಲ್ಲಿ ಪ್ರಸ್ತುತ ಪಡಿಸಲು ಪಾವರ್ ಪಾಯಿಂಟ್ ಸ್ಲೈಡುಗಳನ್ನು ರೂಪಿಸುವುದಕ್ಕೂ ಹೊರತಾದ ಮುಖವೊಂದನ್ನು ರೋಗಿಗಳ ಬಳಿ ಮಾತನಾಡುವಾಗ ನಾವು ತೊಡಬೇಕಾಗುತ್ತದೆ, ವೈಯಕ್ತಿಕ ಕೊಂಡಿಯೊಂದನ್ನು ಸುರಕ್ಷಿತ ಅಂತರದಲ್ಲಿ ಕಲ್ಪಿಸಿಕೊಂಡು ಸಂವಹನ ನಡೆಸಬೇಕಾಗುತ್ತದೆ.

ಎಷ್ಟು ಹಣ ಚೆಲ್ಲಿದರೂ ಆಗದ ಕೆಲಸ ಒಮ್ಮೊಮ್ಮೆ ಚೂರು ನಗು, ಚೂರು ಫ್ಲರ್ಟಿಂಗ್, ಒಂದು ಸಾಂತ್ವನದ ಸ್ಪರ್ಶದಿಂದ ಸಾಧ್ಯವಾಗಿ ಬಿಡುತ್ತದೆ. ಎಷ್ಟೋ ಬಾರಿ ಕೇಶ ವಿನ್ಯಾಸ, ಧರಿಸಿದ ಅರಿವೆಯ ಬಣ್ಣ, ಶೂಗಳ ಹೀಲ್ಸ್‌ನ ಅಳತೆಯೂ ರೋಗಿಗಳ ಮತ್ತವರ ಮನೆಯವರ ಜೊತೆಗಿನ ಸಂವಹನದ ಮೇಲೆ ಪರಿಣಾಮ ಬೀರುತ್ತದೆ ಎಂದರೆ ನಂಬಲು ಸಾಧ್ಯವೇ?

ನಮ್ಮೊಂದಿಗೆ ಥೆರಾಪ್ಯುಟಿಕ್ ಸ್ಪೆಷಲಿಸ್ಟ್‌ಗಳಾಗಿ ಕೆಲಸ ಮಾಡುವ ಉಳಿದೆಲ್ಲರೂ ಗಂಡಸು ಜನಾಂಗಕ್ಕೆ ಸೇರಿದವರಾದ್ದರಿಂದ, (ಈ ಹೆಸರನ್ನು ನಾವೇ ಲಂಚ್ ಬ್ರೇಕ್ ಒಂದರಲ್ಲಿ ಕುಚೋದ್ಯದಲ್ಲಿ ಕೊಟ್ಟುಕೊಂಡಿದ್ದು) ನನ್ನ ಮತ್ತು ಆಲಿಸನ್ ನಡುವೆ ಸೂಕ್ಷ್ಮ ಸ್ಪರ್ಧೆಯೊಂದು ಯಾವತ್ತಿನಿಂದಲೂ ಜಾರಿಯಲ್ಲಿದೆ. ಈ ಲಾವಾರಸ ಮೇಲ್ನೋಟಕ್ಕೆ ಕಾಣದೇ ಸುಪ್ತವಾಗಿ, ಆದರೆ ತೀಕ್ಷ್ಣವಾಗಿ



ಕುದಿಯುತ್ತಿರುವಂಥದು. ಅದನ್ನು ಸಮರ್ಥಿಸುವ ಹಾಗೆ ಅವಳು ಬಸುರಿಯಾದಾಗ ನನ್ನದೂ, ನಾನು ಅಳತೆ ಮೀರಿ ಪಿಜ್ಜಾ ತಿಂದು ದಪ್ಪಗಾದಾಗ ಅವಳದೂ ರಿಪೋರ್ಟುಗಳು ಮ್ಯಾನೇಜ್‌ಮೆಂಟ್ ಮೀಟಿಂಗುಗಳಲ್ಲಿ ಬಹುಬೇಗ ಮುಂದೆ ಮುಂದೆ ಸರಿದಿವೆ ಅಂದರೆ ಈ ಒಳರಾಜಕೀಯ ನಿಮಗರ್ಥವಾದೀತು.

ಈ ಹೊತ್ತು ನನ್ನ ಮುಂದೆ ನರಸಿಂಹನನ್ನು ಎದೆಯೊಳಗಿಟ್ಟುಕೊಂಡು ಶಾಂತ ಕಂಬದಂತೆ ನಿಂತ ಈ ಚಾಕ್ಲೆಟ್ ಕೇಕು ಆಲಿಸನ್ ನನ್ನನ್ನು ಮುಳುಗಿಸಲು ಹೂಡಿರುವ ಅಂಥದೇ ಒಂದು ಹುನ್ನಾರದ ಭಾಗವೆಂದೇ ನನ್ನ ಬಲವಾದ ನಂಬಿಕೆ. ಕಳೆದ ವಾರವಷ್ಟೇ ಆಫೀಸಿನ ವೀಕೆಂಡ್ ಪಾರ್ಟಿಯಲ್ಲಿ ಕೆಂಪು ಆಫ್-ಶೋಲ್ಡರ್ ಡ್ರೆಸ್ಸಿನಲ್ಲಿ ಮಿಂಚುತ್ತಿದ್ದ ನನ್ನನ್ನು ಕಂಡು, 'ಅರೆರೆ, ಎಷ್ಟು ಚೆಂದ ಕಾಣುತ್ತಿದ್ದೀ. ನಿನ್ನ ಟಮ್ಮಿ